**ಪ್ರಧಾನ ಸಿವಿಲ್ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ನಂಜನಗೂಡು, ಮೈಸೂರು ಜಿಲ್ಲೆ .**

**ಸಿ.ಸಿ.ನಂ. 1130/2018**

| | | |
|---|---|---|
| ಸಾಕ್ಷಿದಾರರ ಹೆಸರು | : | ಶಿವಸ್ವಾಮಿ |
| ತಂದೆಯ ಹೆಸರು | : | ಶಿವಪ್ಪ |
| ವಯಸ್ಸು | : | 50 ವರ್ಷ |
| ಉದ್ಯೋಗ | : | ವ್ಯವಸಾಯ |
| ವಾಸಸ್ಥಳ | : | ಹಂಚಿಪುರ, ನಂಜನಗೂಡು ತಾ. |

**ಸಾಕ್ಷಿಯನ್ನು ದಿನಾಂಕಃ 07.07.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ ಮಾನ್ಯ ಸ. ಸ. ಅ. ರವರಿಂದಃ**

ಫ್ರಾಸಾ–1 ಮತ್ತು ಆರೋಪಿಗಳು ನಮ್ಮ ಗ್ರಾಮದ ನಿವಾಸಿಗಳಾಗಿರುತ್ತಾರೆ.

ಸುಮಾರು 4 ವರ್ಷಗಳ ಹಿಂದೆ ಫ್ರಾಸಾ–1ರವರು ತಮ್ಮ ಜಾಗದಲ್ಲಿ ಕೊಟ್ಟಿಗೆ ಕಟ್ಟುತ್ತಿರುವಾಗ ಆರೋಪಿಗಳು ಶೌಚಾಲಯ ಕಟ್ಟಬೇಡ ಎಂದು ಫ್ರಾಸಾ–1ರವರ ಮೇಲೆ ಗಲಾಟೆ ಮಾಡುತ್ತಿದ್ದರು. 1ನೇ ಆರೋಪಿ ದೊಣ್ಣೆಯಿಂದ ಫ್ರಾಸಾ–1ರವರ ತಲೆಗೆ ಮತ್ತು 2 ನೇ ಆರೋಪಿ ಕಲ್ಲಿನಿಂದ ಫ್ರಾಸಾ–1ರವರ ಎದೆಗೆ ಹೊಡೆದಿರುತ್ತಾರೆ. ಆರೋಪಿಗಳು ಫ್ರಾಸಾ–1ರವರನ್ನು ಬಾಯಿಗೆ ಬಂದಂತೆ ಬೈದಿರುತ್ತಾರೆ. ಅಲ್ಲಿಯೇ ಇದ್ದ ನಾನು ಮತ್ತು ಇನ್ನೊಬ್ಬರು ಜಗಳ ಬಿಡಿಸಿರುತ್ತೇವೆ. ನಂತರ ಫ್ರಾಸಾ–1ರವರು ಹೋಗಿ ದೂರು ನೀಡಿರುತ್ತಾರೆ. ನಾನು ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆ. ಆರೋಪಿಗಳು ಹಲ್ಲೆ ಮಾಡಲು ಉಪಯೋಗಿಸಿದ ದೊಣ್ಣೆ ಮತ್ತು ಕಲ್ಲನ್ನು ನೋಡಿದರೆ ಗುರುತಿಸುತ್ತೇನೆ. ಆರೋಪಿಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಮುದ್ದೆ ಮಾಲು–1 ಮತ್ತು 2ನ್ನು ನೋಡಿ ಗುರುತಿಸಿರುತ್ತಾರೆ. ಆರೋಪಿಗಳು ಈ ದಿನ ಗೈರು ಹಾಜರಾಗಿದ್ದು, ಮಾನ್ಯ ಪ್ರತಿರಕ್ಷಣಾ ಪರ ವಕೀಲರು ಆರೋಪಿಗಳ

ಗುರುತಿಸುವಿಕೆಯ ಬಗ್ಗೆ ತಕರಾರು ಇಲ್ಲವೆಂದು ಹೇಳಿದ್ದರಿಂದ, ವಿನಾಯಿತಿ ಅರ್ಜಿಯನ್ನು ಮನ್ನಿಸಲಾಯಿತು.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಬೇಕೆಂದು ಮಾನ್ಯ ಸ.ಸ.ಅ ಕೋರಲಾಗಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.)

**ಪಾಟೀ ಸವಾಲುಃ ಸ.ಸ.ಅ ರವರಿಂದಃ**

ದಿನಾಂಕ 28.03.2018 ರಂದು ನಾನು ಮತ್ತು ಚಾಸಾ-2 ರವರು ಪ್ರಾಸಾ-1 ರವರ ಮನೆಯ ಬಳಿ ಇರುವಾಗ ಬೆಳಿಗ್ಗೆ 7.00 ಗಂಟೆ ಸಮಯದಲ್ಲಿ ಆರೋಪಿಗಳು ಪ್ರಾಸಾ-1 ರವರ ಗಲಾಟೆ ಮಾಡಿ, 2 ನೇ ಆರೋಪಿ ಕೈಯಿಂದ ಪ್ರಾಸಾ-1 ರವರ ಎರಡೂ ಭುಜಕ್ಕೂ ಹೊಡೆದಿರುತ್ತಾರೆ. ಅದೇ ರೀತಿ 1 ನೇ ಆರೋಪಿ ಕೂಡ ಕೈಯಿಂದ ಪ್ರಾಸಾ-1 ರವರಿಗೆ ಹೊಡೆದಿರುತ್ತಾರೆ ಎಂದರೆ ಸರಿ. ಆ ಸಂದರ್ಭದಲ್ಲಿ ಚಾಸಾ-6 ರವರು ಪ್ರಾಸಾ-1 ರವರನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿ ಸೇರಿಸಿರುತ್ತಾರೆ ಎಂದರೆ ಸರಿ.

**ಪಾಟೀ ಸವಾಲುಃ ಆರೋಪಿಗಳ ಪರ ಶ್ರೀ ಸಿ.ಎಲ್.ಬಿ, ವಕೀಲರಿಂದಃ**

ನಾನು ಪ್ರಾಸಾ-1 ರವರಿಗೆ ಬಾವನಾಗಬೇಕು ಎಂದರೆ ಸರಿಯಲ್ಲ. ನನಗೆ ಚಾಸಾ-1 ರವರು ಸಂಬಂಧಿಕರಾಗಿರುವುದಿಲ್ಲ. ಚಾಸಾ-1 ಮತ್ತು 1 ನೇ ಆರೋಪಿಯ ನಡುವೆ ಜಮೀನಿನ ವಿಚಾರವಾಗಿ ತುಂಬಾ ವರ್ಷಗಳಿಂದ ತಕರಾರು ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. 1 ನೇ ಆರೋಪಿಯ ಹೆಂಡತಿ ನನ್ನ ವಿರುದ್ಧ ಪೊಲೀಸ್ ಠಾಣೆಗೆ ದೂರು ನೀಡಿರುತ್ತಾರೆ ಎಂದರೆ ಸರಿ. ಸದರಿ ದೂರಿನ ಆಧಾರದ ಮೇಲೆ ಪ್ರಕರಣ ನಡೆಯುತ್ತಿದೆ ಎಂದರೆ ಸರಿ. ಪ್ರಾಸಾ-1 ರವರು ಶೌಚಾಲಯ ಕಟ್ಟಲು ಹೋಗಿರುತ್ತಾರೆ ಎಂದು ಹೇಳಿದ ಜಾಗ ಯಾರ ಹೆಸರಿನಲ್ಲಿರುತ್ತದೆ ಎಂದು ನನಗೆ ಗೊತ್ತಿಲ್ಲ. ಉಮೇಶರವರಿಗೆ ಅಪಘಾತವಾಗಿತ್ತು ಎಂದರೆ ನನಗೆ ಗೊತ್ತಿಲ್ಲ. ನಾನು ಮತ್ತು ಚಾಸಾ-1 ಬೇರೆ-ಬೇರೆ ಬೀದಿಗಳಲ್ಲಿ ವಾಸ ಮಾಡುತ್ತಿದ್ದೇವೆ. ಚಾಸಾ-1 ರವರ ವಾಸದ

ಮನೆಯ ಅಕ್ಕ-ಪಕ್ಕ ಸಾಕಷ್ಟು ಮನೆಗಳಿರುತ್ತವೆ ಮತ್ತು ನಮ್ಮ ಮನೆಯ ಪಕ್ಕದಲ್ಲೂ ಸಾಕಷ್ಟು ಮನೆಗಳಿರುತ್ತವೆ ಎಂದರೆ ಸರಿ. ಬೆಳಿಗ್ಗೆ 7.00 ಗಂಟೆ ಸಮಯದಲ್ಲಿ ಗ್ರಾಮದಲ್ಲಿ ಜನರು ಸೇರಿರುತ್ತಾರೆ ಎಂದರೆ ಸರಿ. ಗಲಾಟೆಯು ಸುಮಾರು 2 ಗಂಟೆಗಳ ಕಾಲ ನಡೆದಿರುತ್ತದೆ. ಗಲಾಟೆ ಸಮಯದಲ್ಲಿ ಸುಮಾರು 30-40 ಜನ ಸೇರಿದ್ದರು. ನಾನು ಹೇಳಿದಂತೆ ಯಾವುದೇ ಗಲಾಟೆ ನಡೆದಿಲ್ಲ ಎಂದರೆ ಸರಿಯಲ್ಲ. ಆರೋಪಿಗಳು ಯಾವುದೇ ರೀತಿ ಹಲ್ಲೆ ಮಾಡಿಲ್ಲ ಮತ್ತು ಯಾವುದೇ ರೀತಿ ಅವಾಚ್ಯ ಶಬ್ದಗಳಿಂದ ಬೈದಿಲ್ಲ ಎಂದರೆ ಸರಿಯಲ್ಲ. ಆರೋಪಿಗಳು ತಮ್ಮ ಕೈಯಿಂದ ಯಾರಿಗೂ ಹಲ್ಲೆ ಮಾಡಿಲ್ಲ ಎಂದರೆ ಸರಿಯಲ್ಲ. ಆರೋಪಿಗಳಿಗು ಮತ್ತು ನನಗೂ ಮನಸ್ತಾಪವಿರುವುದರಿಂದ ಅವರಿಗೆ ತೊಂದರೆಯಾಗಲೆಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಯಾವುದೇ ಗಲಾಟೆ ಬಿಡಿಸಿಲ್ಲ ಎಂದರೆ ಸರಿಯಲ್ಲ. ನನಗು ಮತ್ತು ಆರೋಪಿಗಳಿಗು ದ್ವೇಷವಿರುವುದರಿಂದ ಫ್ರಾಸಾ-1ರವರಿಗೆ ಅನುಕೂಲವಾಗಲೆಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಮುದ್ದೆ ಮಾಲು-1 ನ್ನು ಸಾಮಾನ್ಯವಾಗಿ ಎಲ್ಲರ ಮನೆಯಲ್ಲೂ ಸೌದೆಗಾಗಿ ಉಪಯೋಗಿಸುತ್ತಾರೆ ಎಂದರೆ ಸರಿ. ಮುದ್ದೆ ಮಾಲು-2 ತರಹದ ಕಲ್ಲುಗಳು ಸಾಮಾನ್ಯವಾಗಿ ಎಲ್ಲಾ ಕಡೆಯಲ್ಲೂ ಸಿಗುತ್ತವೆ ಎಂದರೆ ಸರಿ. ನಾನು ಯಾವುದೇ ಗಲಾಟೆಯನ್ನು ನೋಡಿಲ್ಲದಿದ್ದರೂ ಫ್ರಾಸಾ-1ರವರಿಗೆ ಸಹಾಯವಾಗಲೆಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ:** ಇರುವುದಿಲ್ಲ.

**(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸಾ ಸ ಇ ಒ.,**

ಸಹಿ/-

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.,**

**ನಂಜನಗೂಡು.**